ಕರ್ನಾಟಕ ಸರ್ಕಾರ

(ಕಂದಾಯ ಇಲಾಖೆ)

ಉಪತಹಶೀಲ್ದಾರವರ ಕಾರ್ಯಾಲಯ ನಾಡಕಛೇರಿ ಗುಡೇಕೋಟೆ

ಸಂ/ಕಂ/ಹ.ಬ./ನಾಕಗು/40/2015-16. ದಿನಾಂಕ:21-06-2016.

| ವಾದಿಗಳು | ಪ್ರತಿವಾದಿಗಳು |
|---|---|
| 1)ಶಂಕರ್‌ನಾಯ್ಕ ತಂದೆ ಚೊಂಚಹನುಮನಾಯ್ಕ<br>2)ಕೆ.ಲಕ್ಷೀಬಾಯಿ ಗಂಡ ಕೆ.ಆರ್. ಮಲ್ಲಿಕಾರ್ಜುನನಾಯ್ಕ<br>ಚಿಕ್ಕಜೋಗಿಹಳ್ಳಿ ತಾಂಡ<br>ಕೂಡ್ಲಿಗಿ ತಾಲೂಕು | ಹನುಮಂತನಾಯ್ಕ ತಂದೆ ರಾಮದಾಸನಾಯ್ಕ<br>ಚಿಕ್ಕಜೋಗಿಹಳ್ಳಿ ತಾಂಡ<br>ಕೂಡ್ಲಿಗಿ ತಾಲೂಕು |
| ಕೂಡ್ಲಿಗಿ ತಾಲೂಕು ಮಾಕನಡುಕು ಗ್ರಾಮದ ಸನಂ 464ಬಿಪೈಕಿ. ವಿಸ್ತೀರ್ಣ 0-45 ಸೆಂಟ್ಸು ಜಮೀನನ್ನು ಕ್ರಯ ಪತ್ರ ಪ್ರಕಾರ ಹಕ್ಕು ಬದಲಾವಣೆ ಮಾಡುವ ಬಗ್ಗೆ. | |

ಪ್ರಸ್ತಾವನೆ:

ಕೂಡ್ಲಿಗಿ ತಾಲೂಕು ಮಾಕನಡುಕು ಗ್ರಾಮದ ಸನಂ 464ಬಿಪೈಕಿ. ವಿಸ್ತೀರ್ಣ 0-45 ಸೆಂಟ್ಸು ಜಮೀನನ್ನು ಸದರಿ ತಾಲೂಕು ಚಿಕ್ಕಜೋಗಿಹಳ್ಳಿ ತಾಂಡದ ಕೆ.ಲಕ್ಷ್ಮೀಬಾಯಿ ಗಂಡ ಕೆ.ಆರ್.ಮಲ್ಲಿಕಾರ್ಜುನನಾಯ್ಕ ಇವರಿಂದ ಸದರಿ ತಾಲೂಕು ಚಿಕ್ಕಜೋಗಿಹಳ್ಳಿ ತಾಂಡದ ಶಂಕರ್‌ನಾಯ್ಕ ತಂದೆ ಚೊಂಚಹನುಮನಾಯ್ಕ ಇವರು ದಿನಾಂಕ 15-07-2015 ರಂದು ಡಾಕ್ಯುಮೆಂಟ್ ನಂಬರ್: 1209/2015-16. ರ ಪ್ರಕಾರ ಕ್ರಯ ಪತ್ರ ಪ್ರಕಾರ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ ಕೊಂಡಿರುತ್ತಾರೆ. ಈ ಬಗ್ಗೆ ಗ್ರಾಮಲೆಕ್ಕಿಗರು ಮಾಕನಡುಕು ಇವರು ನಮೂನೆ-21 ನೋಟಿಸನ್ನು ದಿನಾಂಕ 29-07-2015 ರಂದು ಗ್ರಾಮದಲ್ಲಿ ಪ್ರಚೂರು ಪಡಿಸಿ ಹಾಗೂ ಸಂಬಂಧಪಟ್ಟವರಿಗೆ ಜಾರಿ ಮಾಡಲಾಗಿ ಸದರಿ ತಾಲೂಕು ಚಿಕ್ಕಜೋಗಿಹಳ್ಳಿ ತಾಂಡದ ಹನುಮಂತನಾಯ್ಕ ತಂದೆ ರಾಮದಾಸನಾಯ್ಕ ಇವರು ತಕರಾರು ಅರ್ಜಿ ಸಲ್ಲಿಸಿರುವ ಕಾರಣ ಈ ಪ್ರಕರಣವನ್ನು ಎಂ.ಆರ್.ನಂಬರ್: 03/2015-16. ದಿನಾಂಕ 30-08-2015 ರಲ್ಲಿ ವಿವಾದಾಸ್ಪದ ಪ್ರಕರಣವೆಂದು ಪರಿಗಣಿಸಿ ಮುಂದಿನ ಕ್ರಮಕ್ಕೆ ಈ ಕಾರ್ಯಾಲಯಕ್ಕೆ ಕಳುಹಿಸಿ ಕೊಟ್ಟಿರುತ್ತಾರೆ.

ಈ ಪ್ರಕರಣವನ್ನು ಈ ಕಾರ್ಯಾಲಯದಲ್ಲಿ ವಿಚಾರಣೆ ಮಾಡುವ ದಿಸೆಯಲ್ಲಿ ಉಭಯ ಪಕ್ಷದವರಿಗೂ ನೋಟಿಸ್ಸು ನೀಡಿ ದಿನಾಂಕ 29-12-2015 ರಿಂದ 21-06-2016 ರ ವರೆಗೆ ವಿಚಾರಣೆ ಮಾಡಲಾಯಿತು.

ವಿಚಾರಣೆ ಸಮಯದಲ್ಲಿ ಅರ್ಜಿದಾರರು ಮತ್ತು ತಕರಾರುದಾರರು ಹಾಜರಾಗಿರುತ್ತಾರೆ. ಅರ್ಜಿದಾರರು ಮಾಕನಡುಕು ಗ್ರಾಮದ ಸನಂ 464ಬಿಪೈಕಿ. ವಿಸ್ತೀರ್ಣ 0-45 ಸೆಂಟ್ಸು ಜಮೀನನ್ನು ಸದರಿ ತಾಲೂಕು ಚಿಕ್ಕಜೋಗಿಹಳ್ಳಿ ತಾಂಡದ ಕೆ.ಲಕ್ಷ್ಮೀಬಾಯಿ ಗಂಡ ಕೆ.ಆರ್.ಮಲ್ಲಿಕಾರ್ಜುನನಾಯ್ಕ ಇವರಿಂದ ದಿನಾಂಕ 15-07-2015 ರ ಡಾಕ್ಯುಮೆಂಟ್ ನಂಬರ್: 1209/2015-16. ರ ಪ್ರಕಾರ ರೂ: 50.000/-ಗಳಿಗೆ ಖಂಡಿತ ಕ್ರಯಕ್ಕೆ ಖರೀದಿಸಿ ಕೂಡ್ಲಿಗಿಯ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಮಾಡಿಸಿ

ಕೊಂಡಿರುತ್ತೇನೆ. ಕಾರಣ ಸದರಿ ಕ್ರಯ ಪತ್ರ ಪ್ರಕಾರ ನನ್ನ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಬೇಕೆಂದು ಕೋರಿರುತ್ತಾರೆ.

ವಿಚಾರಣೆಯಲ್ಲಿ ತಕರಾರುದಾರರು ಹಾಜರಾಗಿದ್ದು ಸದರಿ ವಿವಾದಿತ ಜಮೀನು ನಮ್ಮ ಕುಟಂಬ ವರ್ಗದವರಿಗೆ ಸೇರಿದ ಜಮೀನು ಆಸ್ತೀಯಾಗಿರುತ್ತದೆ. ಕಾರಣ ಸದರಿ ಕ್ರಯ ಪತ್ರ ಪ್ರಕಾರ ಕ್ರಯದಾರರ ಹೆಸರಲ್ಲಿ ಖಾತಾ ಬದಲಾವಣೆ ಮಾಡಲು ನಮ್ಮ ತಕರಾರು ಇರುವುದಾಗಿ ಕೋರಿರುತ್ತಾರೆ.

ದಿನಾಂಕ 07-6-2016 ರಂದು ಉಭಯರು ಹಾಜರಾಗಿದ್ದು ಸದರಿ ವಿವಾದಿತ ಜಮೀನಿನ ಉಭಯರು ರಾಜಿಯಾಗಿ ತಮ್ಮ ತಕರಾರು ಅರ್ಜಿಯನ್ನು ವಾಪಸ್ಸು ಪಡೆದಿರುವುದಾಗಿ ಸದರಿ ಕ್ರಯ ಪತ್ರ ಪ್ರಕಾರ ಕ್ರಯದಾರರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಯಾವ ಆಕ್ಷೇಪಣೆಗಳು ಇಲ್ಲವೆಂದು ಹೇಳಿಕೆ ನೀಡಿರುತ್ತಾರೆ.

ಮೇಲಿನ ಎಲ್ಲಾ ಅಂಶಗಳನ್ನು ಗಣನೆಗೆ ತೆಗೆದು ಕೊಂಡು ಸದರಿ ವಿವಾದಿತ ಜಮೀನಿನ ಕಂದಾಯ ಲೆಕ್ಕಗಳನ್ನು ಪರಿಶೀಲಿಸಿ ಅರ್ಜಿದಾರರು ಮತ್ತು ತಕರಾರುದಾರರ ಹೇಳಿಕೆಗಳನ್ನು ಕೇಳಿ ಈ ಕೆಳಗಿನಂತೆ ಈ ಆದೇಶ ಮಾಡಲಾಗಿದೆ.

## -:ಆದೇಶ:-

ಮೇಲೆ ವಿವರಿಸಿದ ಸಂದರ್ಭ ವಾಸ್ತುವಾಂಶ ಮತ್ತು ಕಾರಣಗಳಿಂದ ಕೂಡ್ಲಿಗಿ ತಾಲೂಕು ಮಾಕನಡುಕು ಗ್ರಾಮದ ಸನಂ 464ಬಿಪೈಕಿ. ವಿಸ್ತೀರ್ಣ 0-45 ಸೆಂಟ್ಸು ಜಮೀನನ್ನು ದಿನಾಂಕ 15-07-2015 ರ ಡಾಕ್ಯುಮೆಂಟ್ ನಂಬರ್: 1209/2015-16 ರ ಕ್ರಯ ದಸ್ತಾವೇಜು ಪ್ರಕಾರ ಅರ್ಜಿದಾರರಾದ ಹಾಗೂ ಕ್ರಯದಾರರಾದ ಶಂಕರ್‌ನಾಯ್ಕ ತಂದೆ ಚೊಂಚಹನುಮನಾಯ್ಕ ಚಿಕ್ಕಜೋಗಿಹಳ್ಳಿ ತಾಂಡ ಇವರ ಹೆಸರಲ್ಲಿ ಹಕ್ಕು ಬದಲಾವಣೆ ಮಾಡಲು ಆದೇಶಿಸಲಾಗಿದೆ.

ಈ ಆದೇಶವನ್ನು ಹೇಳಿ ಬರೆಯಿಸಿ ಬೆರಳಚ್ಚು ಮಾಡಿಸಿ ತಪ್ಪುಗಳನ್ನು ತಿದ್ದಿ ದಿನಾಂಕ 21-06-2016 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಉಪತಹಶೀಲ್ದಾರರು
ನಾಡಕಛೇರಿ [illegible]
ಗುಡೇಕೋಟೆ

ಇದರ ಪ್ರತಿಯನ್ನು:

1) ಅರ್ಜಿದಾರರಾದ ಶಂಕರ್‌ನಾಯ್ಕ ತಂದೆ ಚೊಂಚಹನುಮನಾಯ್ಕ. ಕ್ಕೆ/ಲಕ್ಷ್ಮೀಬಾಯಿ ಗಂಡ ಕೆ.ಆರ್.ಮಲ್ಲಿಕಾರ್ಜುನನಾಯ್ಕ ಚಿಕ್ಕಜೋಗಿಹಳ್ಳಿ ತಾಂಡ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
2) ತಕರಾರುದಾರರಾದ ಹನುಮಂತನಾಯ್ಕ ತಂದೆ ರಾಮದಾಸನಾಯ್ಕ ಚಿಕ್ಕಜೋಗಿಹಳ್ಳಿ ತಾಂಡ ಕೂಡ್ಲಿಗಿ ತಾಲೂಕು ಇವರಿಗೆ ಕಳುಹಿಸಿ ಕೊಡಲಾಗಿದೆ.
3) ಗಣಕೀಕರಣ ವಿಭಾಗ ತಾಲೂಕು ಕಛೇರಿ ಕೂಡ್ಲಿಗಿ ಇವರ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗಿದೆ.
4) ಅಪೀಲು ಅವಧಿ 60 ದಿವಸ ಇರುತ್ತದೆ.